**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್:475/2014**

ಸಿಡಬ್ಲ್ಯೂ: 3
ಪಿಡಬ್ಲ್ಯೂ: 7

| | | |
|---|---|---|
| ಸಾಕ್ಷಿಯ ಹೆಸರು | : | ಟಿ.ಎನ್. ನಂಜಪ್ಪ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಕ್ಷೌರಿಕ |
| ವಾಸಸ್ಥಳ | : | ಕಾರ್ಕಳ |

ಇಂದು ದಿನಾಂಕ:11.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಎಪಿಪಿಯವರಿಂದ:

ಆರೋಪಿ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಹಾಗೂ ಆ ಕುರಿತು ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ. ಸಾಕ್ಷಿಗೆ ನಿಪಿ-3 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಅದು ಯಾವ ದಾಖಲಾತಿ ಎಂದು ಸರಿಯಾಗಿ ಕಾಣುತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು:** ಮಾನ್ಯ ಎಪಿಪಿಯವರಿಂದ:

1. ಬಿಳಗುಳ ಗ್ರಾಮದ ಹೆಸಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನನ್ನ ಹೆಸರಿಗೆ 60X40 ಅಡಿ ಉದ್ದದ ನಿವೇಶನ ಇತ್ತು ಎಂದರೆ ಸರಿ. ಸದರಿ ನಿವೇಶವನ್ನು ದಿನಾಂಕ:15.12.1981 ರಂದು ಹಕ್ಕುಪತ್ರ ಸಂ.208/1981-82 ರಂತೆ ತಹಶೀಲ್ದಾರ್ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ಹಳೇ ಮೂಡಿಗೆರೆ ಮಂಡಲ ಪಂಚಾಯಿತಿಯಲ್ಲಿ 63/1991-92 ರಂತೆ ಖಾತೆ ಆಗಿತ್ತು ಎಂದರೆ ಸರಿ. ತದನಂತರ ಹೆಸಗಲ್ ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬಂದು ಅಲ್ಲಿ 508/2007-8 ರಂತ ಖಾತೆಯಾಗಿ ನಾನು ತೆರಿಗೆ ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಹಣಕಾಸಿನ ತೊಂದರೆಗಳಾದ ಕಾರಣ ಆ ಆಸ್ತಿಯನ್ನು ಮಾರಾಟ ಮಾಡಲು ಮುಂದಾದೆ ಎಂದರೆ ಸರಿ. ಆ ಆಸ್ತಿಯನ್ನು ನಾನು ಚಾಸಾ-1 ರವರಿಗೆ 1 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದೆ ಎಂದರೆ ಸರಿ. ಆ ಆಸ್ತಿಯನ್ನು ನಾನು ದಿನಾಂಕ:31.03.2011 ರ ಕ್ರಯಪತ್ರದಂತೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಂತೆಯೇ ಮಾರಾಟ ಮಾಡಿದ್ದೇನೆ ಎಂದರೆ ಸರಿ. ನಾನು ಚಾಸಾ-1 ರವರಿಗೆ

ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ

1. ನಿಪಿ-3 ಕ್ಕೆ ಯಾವ ಸಂದರ್ಭದಲ್ಲಿ ರುಜು ಮಾಡಿದ್ದು ನನಗೆ ನೆನಪಿಲ್ಲ. ಚಾಸಾ-1 ನನಗೆ ಹಣ ನೀಡಿಲ್ಲ. ಕಾರಣ ನಾನು ಅವರ ಹೆಸರಿಗೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ. ನನ್ನ ಹೆಸರಿಗೆ ಖಾತೆಯಾದ ಆಸ್ತಿಯ ಹಕ್ಕುಪತ್ರ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ನನಗೆ ಖಾತೆ ಸಂಖ್ಯೆ ಹೇಳಲು ಆಗುವುದಿಲ್ಲ. ನನ್ನ ಹಕ್ಕುಪತ್ರದ ಪ್ರಕಾರ ಆಸ್ತಿಯ ಚಕ್ಕುಬಂದಿ ಹೇಳಲು ಬರುವುದಿಲ್ಲ. ಖಾತೆಯಲ್ಲಿ ಬರೆದಿದ್ದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಎಷ್ಟು ಕಂದಾಯ ಕಟ್ಟಿದ್ದೇನೆ ಎಂದು ನಾನು ಮರೆತು ಹೋಗಿದ್ದೇನೆ. ಆಸ್ತಿಯು ಯಾವಾಗ ಮಂಜೂರಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಾಸಾ-1 ಮತ್ತು 2 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-2 ಸೇರಿ ಸುಳ್ಳು ಹಕ್ಕುಪತ್ರ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-2 ಸೇರಿ ನನ್ನ ಹೆಸರಿಗೆ ಸುಳ್ಳು ಖಾತೆ ಮಾಡಿದ್ದೇವೆ ಎಂದರೆ ಸಾಕ್ಷಿಯು ಸುಮ್ಮನೇ ಮಾಡಿದ್ದಾರೆ ಎಂದು ನುಡಿಯುತ್ತಾರೆ.

2. ನಾನು ಚಾಸಾ-1 ರವರಿಗೆ ನನ್ನ ಸ್ವತ್ತನ್ನು ಕೊಟ್ಟಿಲ್ಲ ಎಂದರೆ ಸರಿ. ಚಾಸಾ-1 ಮತ್ತು 2 ದುಡ್ಡು ಕೊಡುತ್ತೇನೆ ಎಂದು ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ದುಡ್ಡು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ಬಿಳಗುಳದಲ್ಲಿ ಪಂಚಾಯಿತಿ ರಸ್ತೆಯಲ್ಲಿದೆ. ಚಾಸಾ-2 ರವರಿಗೆ ಸ್ತಿಯನ್ನು ಮಾರಾಟ ಮಾಡಿಲ್ಲ. ಚಾಸಾ-2 ಯಾರು ಎಂದು ಗೊತ್ತಿಲ್ಲ ಮತ್ತು ಹಣ ತೆಗೆದುಕೊಂಡಿಲ್ಲ. ನನ್ನ ಆಸ್ತಿಯನ್ನು ಆರೋಪಿಗೆ ಮಾಡಿಸಿಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ